ಅಸಲು ದಾವೆ ಸಂಖ್ಯೆ - 328/2018
ಪಿಡಬ್ಲ್ಯೂ - 01
ದಿನಾಂಕಃ 27.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.2 ಮತ್ತು 3 ರವರ ಪರ ಶ್ರೀ. ಸಿ ಎಸ್ ಎಂ ವಕೀಲರಿಂದ**

ದಾವಾ ಆಸ್ತಿ ಜಮೀನು ಇರುತ್ತದೆ. ಅದರ ಸರ್ವೆ ನಂ.67/3 ಮತ್ತು 4 ಇರುತ್ತವೆ. ಸರ್ವೆ ನಂ.67/3 ಇದರ ಕ್ಷೇತ್ರ 03 ಎಕರೆ 30 ಗುಂಟೆ ಇರುತ್ತದೆ, ಸರ್ವೆ ನಂ.67/4 ಇದರ ಕ್ಷೇತ್ರ 05 ಎಕರೆ 10 ಗುಂಟೆ ಇರುತ್ತದೆ. ಸದರಿ ಜಮೀನುಗಳ ಚಕಬಂದಿ ಗೊತ್ತಿಲ್ಲ. 2009-10 ರಲ್ಲಿ ದಾವಾ ಆಸ್ತಿ ಸರ್ವೆ ನಂ.67/4 ಇದು 1 ನೇ ಪ್ರತಿವಾದಿ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.67/3 ಇದು ವೀರಭದ್ರಪ್ಪನ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸದರಿ ಜಮೀನುಗಳು ನನ್ನ ಸ್ವಂತ ಆಸ್ತಿ ಇದ್ದು, ಪ್ರತಿವಾದಿಯರು ಮೋಸದಿಂದ ತೆಗೆದುಕೊಂಡಿರುತ್ತಾರೆ ಅಂತಾ ಹಾಕಿರುತ್ತೇನೆ. ನಾನು ಬಸವಣ್ಣೆಪ್ಪನಿಗೆ ದತ್ತಕ ಹೋಗಿದ್ದರಿಂದ ದಾವಾ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ದಾವಾ ಆಸ್ತಿಗಳು ನನ್ನ ದತ್ತಕ ತಂದೆ ಆಸ್ತಿಗಳು ಆದ್ದರಿಂದ ನನಗೆ ಹಕ್ಕು ಇರುತ್ತದೆ. ನಾನು ಬಸವಣ್ಣೆಪ್ಪನಿಗೆ ದತ್ತು ಹೋಗಿರುತ್ತೇನೆ ಎಂದರೆ ಸರಿ. ಪ್ರತಿವಾದಿ ನಂ.2 ಮತ್ತು 3 ರವರು ಹುಬ್ಬಳ್ಳಿಯಲ್ಲಿರುತ್ತಾರೆ. ಅವರು ಗುಂಡೂರು ಗ್ರಾಮದವರು ಎಂದರೆ ಸರಿಯಲ್ಲ. ದಿನಾಂಕಃ 06.09.2010 ರಂದು ನಾನು ಎಲ್ಲಿ ಇದ್ದೆ ಅಂತಾ ನೆನಪಿಲ್ಲ. 1 ನೇ ಪ್ರತಿವಾದಿ ನಾಗಪ್ಪ ನನ್ನ ತಮ್ಮ ಎಂದರೆ ಸರಿಯಲ್ಲ. ನಾನು 12 ವರ್ಷದವನಿದ್ದಾಗ ದತ್ತಕ ಹೋಗಿದ್ದರಿಂದ ನಾಗಪ್ಪ ಯಾರು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಆತನ ವಕೀಲರು ಸಲ್ಲಿಸಿರುವ ವಕಾಲತ್ ನಾಮಾ ತೋರಿಸಿ ಸಹಿ ಗುರುತಿಸಲು ಕೇಳಿದಾಗ ಸದರಿ ಸಹಿ ನನ್ನದಲ್ಲ ಅಂತಾ ನುಡಿಯುತ್ತಾರೆ. ನಾನು ಆಯ್ ಬಿ ಮಜ್ಜಿಗೆ ಅಂತಾ ಸಹಿ ಮಾಡುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ದೃಡಿಕೃತ ಖರೀದಿಪತ್ರ ತೋರಿಸಿ ಸಾಕ್ಷಿದಾರರ ಕ್ರಮ ಸಂಖ್ಯೆ ನಂ.2 ರಲ್ಲಿರುವ ಸಹಿಯನ್ನು ನಿಮ್ಮದೇ ಅಂತಾ ಸೂಚಿಸಿದಾಗ ಸಾಕ್ಷಿ ಸದರಿ ಸಹಿ ತನ್ನದಲ್ಲ ಅಂತಾ ನುಡಿಯುತ್ತಾರೆ.

ಅದೇ ರೀತಿ ಸಾಕ್ಷಿಗೆ ದಿಃ 11.05.2009 ರ ಖರೀದಿಪತ್ರದ ದೃಡಿಕೃತ ನಕಲು ತೋರಿಸಿ ಅದರಲ್ಲಿರುವ ಸಹಿ ನಿನ್ನದೇ ಅಂತಾ ಸೂಚಿಸಿದಾಗ ಸಾಕ್ಷಿ ಸದರಿ ಸಹಿಯನ್ನು ಅಲ್ಲಗಳೆಯುತ್ತಾರೆ.

ಸಾಕ್ಷಿಗೆ ವಾದಪತ್ರ ತೋರಿಸಿ ಸಹಿ ಗುರುತಿಸಲು ಕೇಳಿದಾಗ ಸಹಿ ತನ್ನದೇ ಅಂತಾ

ಗುರುತಿಸಿರುತ್ತಾರೆ.

ವಾದಪತ್ರದಲ್ಲಿ, ವಕಾಲತ್ತುನಾಮಾ ಮತ್ತು ಈ ಮೇಲೆ ತೋರಿಸಿದ ಎರಡು ಖರೀದಿ ಪತ್ರದಲ್ಲಿರುವ ಸಹಿಗಳು ಒಂದೇ ಇರುತ್ತವೆ ಮತ್ತು ನನ್ನದೇ ಇರುತ್ತವೆ ಎಂದರೆ ಸರಿಯಲ್ಲ. ಎಲ್ಲಾ ಸಹಿಗಳು ನನ್ನದೇ ಇದ್ದರೂ ಖರೀದಿ ಪತ್ರದಲ್ಲಿರುವ ಸಹಿಗಳು ನನ್ನದಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2009-10 ರಲ್ಲಿ ಸರ್ವೆ ನಂ.67/3 ಜಮೀನಿಗೆ ಪಹಣಿಯಲ್ಲಿ ವೀರಭದ್ರಪ್ಪನ ಹೆಸರು ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.67/4 ಜಮೀನಿಗೆ 1 ನೇ ಪ್ರತಿವಾದಿ ನಾಗಪ್ಪನ ಹೆಸರು ಮಾತ್ರ ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಅವರೆಲ್ಲಾ ನನಗೆ ಮೋಸ ಮಾಡಿರುತ್ತಾರೆ ಅಂತಾ ನುಡಿಯುತ್ತಾರೆ. ಸದರಿ ವೀರಭದ್ರಪ್ಪ ಮತ್ತು ಪ್ರತಿವಾದಿ ನಂ.1 ತಮ್ಮ ಮನೆತನದ ಅಡಚಣೆ ಸಲುವಾಗಿ 2 ಮತ್ತು 3 ನೇ ಪ್ರತಿವಾದಿಯರಿಗೆ ನೊಂದಾಯಿತ ಖರೀದಿಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2009-10 ರಲ್ಲಿ 1 ನೇ ಪ್ರತಿವಾದಿಯ ಮನೆತನದ ಪರಿಸ್ಥಿತಿ ಹೇಗೆ ಇತ್ತು ನನಗೆ ಗೊತ್ತಿಲ್ಲ. ಅದೇ ರೀತಿ ವೀರಭದ್ರಪ್ಪನ ಮನೆತನದ ಪರಿಸ್ಥಿತಿ ಹೇಗೆ ಇತ್ತು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ನನ್ನ ತಂದೆ ವೀರಭದ್ರಪ್ಪ ದಿನಾಂಕಃ 11.05.2009 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಖರೀದಿ ಮಾಡಿದವರ ಹೆಸರುಗಳು ಸಂಬಂಧಪಟ್ಟ ಕಂದಾಯ ದಾಖಲೆಗಳಲ್ಲಿ ದಾಖಲಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಸದರಿ ಜಮೀನುಗಳನ್ನು ಪ್ರತಿವಾದಿಯರು ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನ್ನ ಮನೆತನದ ಅಡಚಣೆ ಸಲುವಾಗಿ ದಿನಾಂಕಃ 17.04.2012 ರಂದು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಆತನ ಹೆಸರು ಪಹಣಿಗಳಲ್ಲಿ ದಾಖಲಾಗಿರುತ್ತದೆ ಎಂದರೆ ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ. ಅವರು ಕಬ್ಜೆಯಯಲ್ಲಿರುತ್ತಾರೆ ಎಂದರೆ ಸರಿಯಲ್ಲ ನಾನು ಕಬ್ಜೆಯಲ್ಲಿ ಇರುತ್ತೇನೆ. ಅದೇ ರೀತಿ 3 ನೇ ಪ್ರತಿವಾದಿ ಸಹ ತನ್ನ ಮನೆತನದ ಅಡಚಣೆ ಸಲುವಾಗಿ ಆಸ್ತಿಯನ್ನು ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ಪ್ರತಿವಾದಿಯರು ದಾವಾ ಆಸ್ತಿಯನ್ನು ಕಬ್ಜಾ ವಹಿವಾಟಿ ಮಾಡುತ್ತಾರೆ ಎಂದರೆ ಸರಿಯಲ್ಲ, ನಾನು ಕಬ್ಜಾ ವಹಿವಾಟಿ ಮಾಡುತ್ತೇನೆ. ದಾವಾ ಆಸ್ತಿಗಳು ನನ್ನದು ಅಂತಾ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೋಸ ಮಾಡಿ ದಾವಾ ಆಸ್ತಿಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಅಂತಾ ನನಗೆ 2018 ರಲ್ಲಿ ಗೊತ್ತಾಗಿರುತ್ತದೆ. ನಾನು ಆ ಕುರಿತು ಯಾವುದೇ ದೂರು ನೀಡಿಲ್ಲ. ದಾವಾ ಆಸ್ತಿಗೆ ಯಾವುದೇ ರೀತಿಯ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ ನಂ.4 ಮತ್ತು 5 ರವರ ಪರ ಶ್ರೀ.ಎಂ ಎಸ್ ಎಂ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, 200/- ರೂಪಾಯಿ ವೆಚ್ಚದೊಂದಿಗೆ ಸಮಯಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.